ತಾಲ್ಲೂಕು ಕಛೇರಿಯ ಕಂಪ್ಯೂಟರ್ ನಿರ್ವಹಣೆ ಮತ್ತು ಪಹಣಿ ಪತ್ರ

635 (290) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಕಛೇರಿಯ ಕಂಪ್ಯೂಟರ್ ನಿರ್ವಹಣೆಗೆ 25,000-00 ರೂ.ಗಳನ್ನು ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ರೂ. 25,000-00 ಗಳನ್ನು ಎಲ್ಲಾ ತಾಲ್ಲೂಕುಗಳಿಗೂ ಸಮನಾಗಿ ನೀಡಲಾಗುತ್ತಿದೆಯೇ;

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 10,000 ಪಹಣಿ ಪತ್ರಗಳಿದ್ದು ಮತ್ತು ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ 3,07,000 ಪಹಣಿ ಪತ್ರಗಳಿದ್ದು ಈ ಎರಡು ಕಡೆಗಳ ನಿರ್ವಹಣೆಗೆ ನೀಡುವ ಹಣದಲ್ಲಿ ತಾರತಮ್ಯವಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಹೌದು.

ಇ) ಎಲ್ಲಾ ಭೂಮಿ ಕೇಂದ್ರಗಳಲ್ಲಿ ಫೆಸಿಲಿಟಿ ಮ್ಯಾನೇಜರ್‌ನ್ನು ಕಂಪ್ಯೂಟರಿನ ಇತರೆ ಉಪಕರಣಗಳ ನಿರ್ವಹಣೆಗಾಗಿ ನೇಮಕ ಮಾಡಿದೆ. ಇದೇ ಮ್ಯಾನೇಜರ್‌ಗಳು ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಬಳಕೆ ವಸ್ತುಗಳನ್ನು ಸರಬರಾಜು ಮಾಡುವರು. ಆದುದರಿಂದ ಯಾವುದೇ ತಾಲ್ಲೂಕಿಗೆ ಜನರೇಟರಿನ ಇಂಧನದ ಬಳಕೆಯನ್ನು ಹೊರತುಪಡಿಸಿ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವ ಅಗತ್ಯ ಇರುವುದಿಲ್ಲ. ಈ ಯೋಜನೆಗಾಗಿ ಅಥವಾ ಬಳಕೆ ವಸ್ತುಗಳಿಗಾಗಿ ಹಣದ ಕೊರತೆಯಾಗದಂತೆ ನಿಶ್ಚಿತಗೊಳಿಸಲಾಗುವುದು.

ಬೆಂಗಳೂರು ದಕ್ಷಿಣ ತಾಲ್ಲೂಕು ಹೊಸಕೆರೆಹಳ್ಳಿ ಸರ್ವೆ ನಂಬರ್ 87ರ ವಿವರ

636 (1062) ಶ್ರೀ ಹಾಲಪ್ಪ ವಿ.ಬಿ (ಹಡಗಲಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ಹೊಸಕೆರೆಹಳ್ಳಿ ಸರ್ವೆ ನಂ. 87ರ ವಿಸ್ತೀರ್ಣವೆಷ್ಟು ವಿಲೇವಾರಿ ಮಾಡಿರುವುದು ಎಷ್ಟು; ಎಷ್ಟು ವಿಸ್ತೀರ್ಣಕ್ಕೆ ನ್ಯಾಯಾಲಯದಲ್ಲಿ ದಾವೆ ಇದೆ;

ಆ) ಈ ಜಮೀನಿನಲ್ಲಿ ಸ್ವಾತಿ ಎಜುಕೇಷನ್ ಟ್ರಸ್ಟ್‌ಗೆ ನೀಡಿರುವ 0-35 ಗುಂಟೆ ಜಮೀನಿಗೆ ಅಳತೆಮಾಡಿ ಗಡಿ ನಿಗಧಿಪಡಿಸಲಾಗಿದೆಯೇ;

ಇ) ನ್ಯಾಯಾಲಯದಲ್ಲಿರುವ ಜಮೀನನನ್ನು ಈ ಟ್ರಸ್ಟ್‌ಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಇಲಾಖೆಯು ಕೈಗೊಂಡಿರುವ ಕ್ರಮಗಳೇನು;

ಈ) ಸರ್ವೆ ನಂ. 87ರ ಜಮೀನಿನ ಸಂಪೂರ್ಣ ವಾಸ್ತವ ಸ್ಥಿತಿ ಏನು? (ಎಕರೆವಾರು ಗುಂಟೆವಾರು ವಿವರ ಒದಗಿಸುವುದು)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 1) ಹೊಸಕೆರೆಹಳ್ಳಿ ಗ್ರಾಮದ ಸ.ನಂ. 87ರಲ್ಲಿ ಒಟ್ಟು 27-37 ಎ.ಗುಂ. ಜಮೀನಿದ್ದು ಸರ್ಕಾರಿ ಗೋಮಾಳವಾಗಿರುತ್ತದೆ.

2) ಇದರಲ್ಲಿ ಒಟ್ಟು 23-00 ಎಕರೆ ಮಂಜೂರಾಗಿರುತ್ತದೆ.

3) ಮಂಜೂರಾದ 23-00 ಎಕರೆಯ ಪೈಕಿ 16-00 ಎಕರೆ ವಿಸ್ತೀರ್ಣಕ್ಕೆ ನ್ಯಾಯಾಲಯದಲ್ಲಿ ದಾವೆ ಇರುತ್ತದೆ.

ಆ) ಇಲ್ಲ

ಇ) ಕರ್ನಾಟಕ ಅಪೀಲು ಮೇಲ್ಮನವಿ ಪ್ರಾಧಿಕಾರದ ಆದೇಶದ ದಿನಾಂಕ:7-10-2002ರ ವಿರುದ್ಧ ಸದರಿ ಟ್ರಸ್ಟ್‌ನವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 44196:02 ಸಲ್ಲಿಸಿದ್ದು, ಉಚ್ಚ ನ್ಯಾಯಾಲಯ ತನ್ನ ದಿನಾಂಕ: 16-12-2002ರ ಮಧ್ಯಾಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದೆ.

ಆದ್ದರಿಂದ ಟ್ರಸ್ಟ್‌ಗೆ ಜಮೀನು ಸ್ವಾಧೀನ ನೀಡಿರುವುದಿಲ್ಲ.

ಈ) ಸರ್ವೆ ನಂ.87ರಲ್ಲಿ ಒಟ್ಟು 27-37 ಎ.ಗುಂ. ಜಮೀನಿದ್ದು, ಈ ಪೈಕಿ 23-00 ಎಕರೆ ವಿಲೇಯಾಗಿದ್ದು ಹಾಲಿ ವಾಸ್ತವ ಸ್ಥಿತಿ ಈ ಕೆಳಕಂಡಂತಿರುತ್ತೆ.

4-00 ಮುರುಗೇಶ್ ಎಂಬುವರಿಗೆ ಮಂಜೂರಿ. ಹೋಸ ನಂ. 130 ಆಗಿದೆ.

15.05 ರಾಮರಾಜು ಇತರೆ 6 ಜನರಿಗೆ ಮಂಜೂರಾಗಿ ನಂ. 142 ರಿಂದ 149 ಆಗಿದೆ. ನಂತರ ರದ್ದಾಗಿದ್ದು ನ್ಯಾಯಾಲಯದಲ್ಲಿ ದಾವೆ ಇರುತ್ತೆ. ಅನುಭವದಲ್ಲಿ ಸುಮಾರು

1-00 ಎಕರೆ ಕಡಿಮೆ ಇರುತ್ತದೆ.

1.20 ರಾಮಕೃಷ್ಣ ಆಶ್ರಮ ಟ್ರಸ್ಟಿಗೆ ಮಂಜೂರಾಗಿದ್ದು 1-20 ರಲ್ಲಿ ಅನುಭವದಾರರಾಗಿರುತ್ತಾರೆ.

1.00 ಸರ್ಕಾರಿ ಪ್ರಾಥಮಿಕ ಶಾಲೆಗೆ ಮಂಜೂರಾಗಿದೆ

0.35 ಸ್ವಾತಿ ಎಜುಕೇಷನ್ ಟ್ರಸ್ಟಿಗೆಮಂಜೂರಾಗಿದ್ದು ರದ್ದಾಗಿದೆ, ಈ ಪಾಕಿ

0.15 ಗುಂಟೆ ಸರ್ವೆ ನಂ. 149 ರಲ್ಲಿ ಸೇರಿದೆ.

1.19 ಎಕರೆ ವೀರಭದ್ರಸ್ವಾಮಿ, ಬದ್ರ ಕಾಳಮ್ಮ ದೇವಾಲಯಗಳಿದ್ದು, ದೇವಾಲಯದ ಜಾತ್ರೆ ವಗೈರೆಗೆ ಉಪಯೋಗಿಸಲಾಗುತ್ತಿದೆ.

0.12 ಗುಂಟೆ ಮುನೇಶ್ವರ ದೇವಾಲಯ ಹಾಗೂ ಮರಗಳ ತೋಪು ಇರುತ್ತದೆ.

0.13 ಗುಂಟೆ ಪ್ರದೇಶದಲ್ಲಿ ಅನಾಥಾಶ್ರಮ ಇರುತ್ತದೆ.

0.01 ಗುಂಟೆ ಪ್ರದೇಶವನ್ನು ಅಪಾರ್ಟ್‌ಮೆಂಟಿನವರು ಒತ್ತುವರಿ ಮಾಡಿದ್ದು ನ್ಯಾಯಾಲಯದಲ್ಲಿದೆ.

3.12 ಎಕರೆ ಪ್ರದೇಶದಲ್ಲಿ ಸುಮಾರು 166 ಮನೆಗಳನ್ನು ಅಕ್ರಮವಾಗಿ ಕಟ್ಟಿದ್ದು 94-ಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಸಿಂಧನೂರು ರಾಜ್ಯ ಹೆದ್ದಾರಿ ಕಾಮಗಾರಿ

637 (984) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧನೂರು ದಿಂದ ತೆಕ್ಕಲಕೋಟ ರಾಜ್ಯ ಹೆದ್ದಾರಿ ಕಾಮಗಾರಿಯ (ವಿಶ್ವ ಬ್ಯಾಂಕ್ ಯೋಜನೆ) ಯಾವ ಹಂತದಲ್ಲಿದೆ; ಯಾವ ತರಹದ ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ;